ದಲಿತರ ಬೆತ್ತಲೆ ಮೆರವಣಿಗೆಯಿಂದ
"ಭಾರತ ಪ್ರಕಾಶಿಸುತ್ತಿದೆ."
------------------------------
--ಹುಚ್ಚಂಗಿ ಪ್ರಸಾದ್. ಸಂತೇಬೆನ್ನೂರು.

"ಅಸ್ಪೃಶ್ಯತೆ ಬೇರು ಜಾತಿ ವ್ಯವಸ್ಥೆಯಲ್ಲಿದೆ.ಜಾತಿ ಬೇರು ವರ್ಣವ್ಯವಸ್ಥೆಯಲ್ಲಿದೆ.ವರ್ಣದಬೇರು ರಾಜ್ಯಾಧಿಕಾರದಲ್ಲಿದೆ" ಬಾಬಸಾಹೇಬ ಡಾ.ಬಿ.ಆರ್ ಅಂಬೇಡ್ಕರ್ ರವರ ಈ ಮಾತು ಪ್ರಸ್ತುತ ವರ್ತಮಾನದಲ್ಲಿ ಅರ್ಥ ಪೂರ್ಣಗೊಂಡಿದೆ. ಭಾರತ ವಿಶ್ವದ ಮುಂದೆ ತಲೆತಗ್ಗಿಸಿಕೊಂಡು ಹೇಸಿಗೆ ತಿನ್ನುವಂತಾಗಿದೆ.
ದಲಿತರ ಮೇಲೆ ಹಲ್ಲೆಹತ್ಯೆಗಳು ನಡೆಯುವುದು ಹೊಸದೇನಲ್ಲ..ಆದರೆ ದಲಿತರ ಮೇಲೆ ತುಂಬಾ ಭಯಾನಕ ಕೊಲೆ.ಸುಲಿಗೆ.ಅತ್ಯಾಚಾರಗಳು ವಿಭಿನ್ನವಾಗಿ ನಡೆಯುತ್ತಿರುವುದು ದುರಂತ.

ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಶ್ಯಾನಡ್ರಹಳ್ಳಿಯಲ್ಲಿ ದಲಿತ ಯುವಕ ದೇವಾಲಯದ ಒಳಗೆ ಪ್ರವೇಶಿಸಿದ್ದು ಅಪವಿತ್ರವೆಂದು ಯುವಕನನ್ನು ಹಲ್ಲೆಗೈದು ಬೆತ್ತಲೆ ಮೆರವಣಿಗೆ ಮಾಡಿರುವುದು ಜಗತ್ತೆ "ಶೇಮ್ ಶೇಮ್ ಭಾರತ"ಎನ್ನುವಂತ ಸ್ಥಿತಿಗೆ ಬಂದು ನಿಂತಿದೆ.

ಮೂಲ ಗುಂಡ್ಲುಪೇಟೆ ನಿವಾಸಿಯಾಗಿರುವ ಪ್ರತಾಪ್ ಎಂಬ ಯುವಕ ಪರಿಶಿಷ್ಠ ಜಾತಿಯ ಹೊಲೆಯ ಜಾತಿಗೆ ಸೇರಿದ್ದು ತುಂಬಾ ಕಡುಬಡತನದಲ್ಲೆ ತಾನು ಚನ್ನಾಗಿ ಶಿಕ್ಷಣ ಪಡೆದು ಪದವಿಯನ್ನು ಮುಗಿಸಿದ್ದಾನೆ.

ಹೇಗಾದರು ನಾನು IAS ಅಧಿಕಾರಿಯಾಗಬೇಕೆಂದು ಕನಸ್ಸು ಕಂಡಿದ್ದ ದಲಿತ ಯುವಕ ಪ್ರತಾಪ್ ಮೈಸೂರಿನ ಮರಿಮಲ್ಲಪ್ಪ ಹಿರಿಯ ಪ್ರಾಥಮಿಕ ಶಾಲೆಗೆ IAS ಪರೀಕ್ಷೆ ಬರೆಯಲ್ಲು ತೆರಳಿದ್ದನು.
ತಾನು ಕಾರಣಾಂತರಗಳಿಂದ ತಡವಾಗಿ ಪರೀಕ್ಷಾ ಕೇಂದ್ರಕ್ಕೆ ಹೋಗಿದ್ದರಿಂದ ಅಲ್ಲಿನ ಅಧಿಕಾರಿಗಳು ಸಮಯವಾಗಿದೆ ಒಳಗೆ ಪ್ರವೇಶವಿಲ್ಲ ಎಂದು ಕಳಿಸಿದ್ದಾರೆ.ಎಷ್ಟೋ ದಿನಗಳಿಂದ ಕಟ್ಟಿಕೊಂಡಿದ್ದ ಆಸೆಗೋಪುರದ ಕನಸ್ಸು ಭಗ್ನಗೊಂಡಿತೆಂದು ತಾನು ತುಂಬಾ ಬೇಸರದಿಂದ ಮೈಸೂರಿನಲ್ಲಿ ಕಾಲಕಳೆದು ವಾಪಸು ಗುಂಡ್ಲುಪೇಟೆ ಕಡೆಗೆತನ್ನ ಬೈಕಿನಲ್ಲಿ ಬಂದು ಅದೇ ದಿನ ರಾತ್ರಿ ರಾಘವಪುರ ಗ್ರಾಮದ ಹತ್ತಿರ ಅವನ ಬೈಕ್ ಕೆಟ್ಟುಹೋಗಿದ್ದು ಅದೆ ಸಂದರ್ಭಕ್ಕೆ ಬಂದ ಕೆಲವು ದುಷ್ಕರ್ಮಿಗಳು ಪ್ರತಾಪ್ ಹತ್ತಿರವಿದ್ದ ಹಣ ಹಾಗು ಇನ್ನಿತರ ವಸ್ತುಗಳನ್ನೆಲ್ಲಾ ದರೋಡೆ ಮಾಡಿದ್ದಾರೆ.

ನಂತರ ಹೆದರಿಭಯಗೊಂಡ ಯುವಕ ಮುಂದಕ್ಕೆ ಹೋಗಲು ಆಗದೆ ರಾತ್ರಿಯಿಡಿ ಅಲ್ಲೆ ಕಾಲಕಳೆದು ಬೆಳಿಗ್ಗೆ ಜೂನ್ 03ರಂದು ಬೆಳಿಗ್ಗೆ 6 ಗಂಟೆಗೆ ಆಶ್ರಯಕ್ಕಾಗಿ ವೀರನಪುರ ಗೇಟ್ ಬಳಿಯಿರುವ ಶನಿಮಹಾತ್ಮನ ದೇವಸ್ಥಾನಕ್ಕೆ ಹೋಗಿದ್ದಾನೆ.
ಅಲ್ಲಿದ್ದ ಅರ್ಚಕರು ಇತನ ಮೇಲೆ ಅನುಮಾನಸ್ಪದ ವ್ಯಕ್ತಪಡಿಸಿ ವಿಚಾರಿಸಿದಾಗ ಈತನು ತುಂಬಾ ಗಾಬರಿಗೊಂಡಿದ್ದಾನೆ.
ನಂತರ ಸ್ಥಳಕ್ಕೆ ದಾವಿಸಿದ ಗ್ರಾಮಸ್ಥರ ಗುಂಪು ಈತನನ್ನು ವಿಚಾರಿಸಿದಾಗ ಈತನ ಊರು.ಇವನು Sc ಜಾತಿಯ ಹೊಲೆಯ ಜನಾಂಗದವನೆಂದು ತಿಳಿದ ನಂತರ "ಕೀಳ್ ಮುಂಡೆ ಮಗ ಹೊಲೆರ್ ಮಗನೆ ದೇವಾಲಯದ ಒಳಗೆ ಬಂದು ಅಪವಿತ್ರಗೊಳಿಸಿದ್ದಿಯಾ ಎಂದು" ಜಾತಿ.ಸಂಪ್ರದಾಯಗಳನ್ನೆ ತಿಂದುಬೆಳೆದ ಮೇಲ್ಜಾತಿ ರಾಕ್ಷಸರು ಆ ಯುವಕನ ಮೇಲೆ ಮಾರಣಾಂತಿಕ ಹಲ್ಲೆ ಮಾಡುತ್ತಾರೆ.ತೆಂಗಿನಮರಕ್ಕೆ ಕಟ್ಟಿ ತಲೆಗೆ ರಕ್ತಸೋರುವಂತೆ ಹೊಡೆಯುತಾರೆ.
ಅಣ್ಣಾ ತಪ್ಪಾತು ಹೊಡಿಬ್ಯಾಡ್ರಿ ಎಂದು ಕೈ ಮುಗಿದು ಕೇಳಿದರು ಮರುಗದ ಮನಸ್ಸುಗಳ ಕಿವಿಗೆ ಬೀಳಲಿಲ್ಲ.ಹಿಗ್ಗಾಮುಗ್ಗಾ ಥಳಿಸಿ ಬೀಬತ್ಸ ಕ್ರೌರ್ಯವನ್ನು ಮೆರೆಯುತ್ತಾ"ಯಾವನೆ ಹೊಲೆಯ ದೇವರಗುಡಿ ಮುಟ್ಟಬಾರದು ತಕ್ಕಪಾಠಕಲಿಸಬೇಕು"ಎಂದು ಅರ್ಚಕನ ಮಾತಿಗೆ ಗುಂಪಾದ ಗ್ರಾಮದ ಜನ ಸಿಕ್ಕಸಿಕ್ಕ ಅಸ್ತ್ರಗಳನ್ನಿಡಿದು ಹೊಡೆಯುತ್ತಾರೆ.ಥಳಿಸಿದ್ದಲ್ಲದೆ ದಲಿತ ಯುವಕ ಪ್ರತಾಪ್ ನ ಮೈಮೇಲಿನ ಬಟ್ಟೆಗಳನ್ನು ಹರಿದು ಬೆತ್ತಲೆಗೊಳಿಸಿ ಎರಡು ಕೈಗಳನ್ನು ಬೆನ್ನಹಿಂದೆ ಹಗ್ಗದಿಂದ ಕಟ್ಟಿ ಚಾಟಿಯಿಂದ ಹೊಡೆಯುತ್ತಾ ದೇವಸ್ಥಾನದಿಂದ ಊಟಿ ಮೈಸೂರು ರಸ್ತೆಯ ಮುಖ್ಯರಸ್ತೆಯವರೆಗು ತುಂಡುಬಟ್ಟೆಯಿಲ್ಲದ ಮೆರವಣಿಗೆ ಮಾಡುತ್ತಾರೆ.ಇದರಿಂದ ಆಧುನಿಕ ಭರಾಟೆಯಲ್ಲಿ ಭಾರತ ಮುಳುಗಿದ್ದರು ಜಾತಿಯ ಕ್ರೂರತೆಯ ಭಯಾನಕ ಅಮಾನವೀಯ ಶೋಷಣೆ ಜೀವಂತವಾಗಿದೆ ಎಂದು ಸಾರಿಸಾರಿ ತಿಳಿಸುತ್ತಿದೆ.ಇದರಿಂದ ವಿಶ್ವದ ಮುಂದೆ ಮತ್ತೊಮ್ಮೆ ಭಾರತ ಬೆತ್ತಲಾಗಿ ನಿಂತಿದೆ.

ಒಬ್ಬ ವ್ಯಕ್ತಿ ಇನ್ನೊಬ್ಬರ ಎದುರು ಬೆತ್ತಲೆಯಾಗಿ ಇದ್ದಾಗ ಕನಿಷ್ಠ ಮಾನವೀಯತೆಗೋಸ್ಕರವಾದ್ರು ಬಟ್ಟೆ ಕೊಡದೆ ನಾಚಿಕೆಯಿಲ್ಲ ನಾಯಿಯಂತೆ ಹಗ್ಗದಿಂದ ಎಳೆದು ತರುತ್ತಿರುವುದು ಹಾಗು ಈಗಾಗಲೇ ಧಣಿದಿದ್ದ ದೇಹಕ್ಕೆ ಒಂದುಗುಟುಕು ನೀರುಕೊಡದೆ ಕ್ರೌರ್ಯವನ್ನು ಮೆರೆದಿರುವುದು ತುಂಬಾ ನೋವಿನ ಸಂಗತಿಯಾಗಿದೆ.

ಈ ರೀತಿ ಗುಂಪು ಕಟ್ಟಿಕೊಂಡು ಜಾತಿನಿಂದನೆ ಮಾಡಿ.ಬೆತ್ತಲೆಮೆರವಣಿಗೆ ಗೈದು.ಅಮಾನವೀಯ ಪ್ರಕರಣ ನಡೆದರು ಪೋಲೀಸ್ ಇಲಾಖೆ ದೂರು ದಾಖಲಿಸಿಕೊಂಡಿಲ್ಲ.ಪೋಲೀಸ ಇಲಾಖೆಯಲ್ಲಿ ಮಡುಗಟ್ಟಿದ ಜಾತಿವಾದಿಗಳು ಕೇಸನ್ನೆ ಮುಚ್ಚಲು ಎಲ್ಲಾ ತಂತ್ರಗಳನ್ನು ಮಾಡಿದ್ದಾರೆ.
ಗ್ರಾಮದ ಜನರು ಇವನು ಹುಚ್ಚ.ತಲೆ ಸರಿಯಿಲ್ಲ ನಮಗೆ ಹೊಡೆದಿದ್ದಾನೆ ಎಂದು ಪ್ರತಾಪ್ ನ ಮೇಲೆ ದೂರುದಾಖಲಿಸಿರುವುದು ನಿಜಕ್ಕೂ ಆಶ್ಚರ್ಯಕರವಾಗಿದೆ.

ಈ ರೀತಿ ಪ್ರಕರಣ ನಡೆದು ಒಂದು ವಾರ ಕಳೆದರು ಗುಂಡ್ಲುಪೇಟೆ ಪೋಲಿಸ ಇಲಾಖೆ ದೂರು ದಾಖಲಿಸಿಕೊಂಡಿಲ್ಲ.ನೊಂದವರಿಗೆ ನೆರವು ಕೊಡಬೇಕಿದ್ದ ಪೋಲಿಸ್ ನೋವನ್ನೆ ಕೊಡುತ್ತಿರುವುದು ಸರ್ಕಾರದ ಬೇಜವಬ್ದಾರಿ ಆಡಳಿತವಾಗಿದೆ.
ಪೋಲೀಸ್ ರವರು ಕನಿಷ್ಠ Suo - motto ಅಡಿಯಲ್ಲಿ ಕೇಸಯ ದಾಖಲಿಸಿಕೊಳ್ಳಬಹುದಿತ್ತು.ಇಂತಹ ನೀಚ ಪ್ರಕರಣ ಭಾರತೀಯ ಸಂವಿಧಾನದ ಕಲಂ 17 ಉಲ್ಲಂಘನೆಯಾಗಿದೆ.
ಪೋಲಿಸ್ ಠಾಣೆಗಳು ಇವತ್ತು ದಲಿತರಿಗೆ ಆದಿವಾಸಿಗಳಿಗೆ ಕಟ್ಟಕಡೆಯ ಜನರಿಗೆ ತನ್ನ ಬಾಗಿಲನ್ನು ಮುಚ್ಚಿದೆ ಎಂಬುದು ಜಗಜ್ಜಾಹಿರಗೊಂಡಿದೆ.

ಈ ಸುದ್ದಿಯನ್ನು ಕರ್ನಾಟಕದ ಯಾವುದೆ ಟಿವಿ ಮಾಧ್ಯಮಗಳು ಪ್ರಸಾರ ಮಾಡದೆ ಇರುವುದು ಅವರ ಮನುವಾದಿ ಬಣ್ಣದ ಮುಖವಾಡವನ್ನು ಕಳಚುತ್ತದೆ.ಸಾಮಾಜಿಕ ಸಮಾನತೆಗೆ ಧ್ವನಿಯಾಗಬೇಕಿದ್ದ ಮಾಧ್ಯಮಗಳು ಹಣವಂತರ.ಅಧಿಕಾರವಂತರ ಹಾಗು ಸಂಪ್ರದಾಯವಾದಿಗಳ ಚೇಲಗಳಾಗುತ್ತಿವೆ.

ಸಾಮಾಜಿಕ ಜಾಲತಾಣದಲ್ಲಿ ಬೆತ್ತಲೆಯಲ್ಲಿ ಮೆರವಣಿಗೆ ಮಾಡಿಕೊಂಡು ಹಗ್ಗದಿಂದ ಎಳೆದು ಹೋಗುತ್ತಿರುವ ದೃಶ್ಯ ರಾಜ್ಯಾದ್ಯಂತ ಹರಡಿ ತಕ್ಷಣವೆ ದಲಿತ ಸಂಘಟನೆಗಳು ಎಚ್ಚೆತ್ತು ಪ್ರತಿಭಟನೆಗಳನ್ನು ಮಾಡಿವೆ.
ಉಗ್ರಪ್ರತಿಭಟನೆಗಳಿಗೆ ಬೆಂಡಾದ ಪೋಲಿಸ್ ಇಲಾಖೆ ತಕ್ಷಣ ಪ್ರಕರಣ ದಾಖಲಿಸಿಕೊಂಡು SC/ST ದೌರ್ಜನ್ಯ ಕಾಯ್ದೆ.IPC ಸೆಕ್ಷನ್ 143 ದೊಂಬಿ.147 ದರೋಡೆ.395 ಹಲ್ಲೆ.323 ಅಕ್ರಮ ಬಂಧನ 342 ಉದ್ದೇಶ ಪೂರ್ವಕವಾಗಿ ಶಾಂತಿ ಕದಡುವುದು 509 ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ದಾಖಲಿಸಿಕೊಂಡಿದ್ದಾರೆ.

ಒಬ್ಬ IAS ಅಧಿಕಾರಿ ಆಗಬೇಕೆಂದು ಕನಸ್ಸುಕಂಡಿದ್ದ ಪ್ರತಾಪ್ ಈಗ ಜಾತಿವಾದಿ ಕ್ರೂರಿಗಳಿಂದ ನೊಂದುಬೆಂದು ಜರ್ಜರಿತಗೊಂಡಿದ್ದಾನೆ.ಸಾವು ಬದುಕಿನಲ್ಲಿ ಹೋರಾಡುತ್ತಿರುವ ಈತ ಸಧ್ಯಕ್ಕೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾನೆ.

ಎಂತ ಅನಾಗರಿಕ ಸಂಸ್ಕೃತಿ ಇಂದು ಬೆಳೆಯುತ್ತಿದೆ.ಕೋಮುವಾದಿ ಜಾತಿವಾದಿ ಮನುವಾದಿಗಳೆ ದೇಶವನ್ನು ಆಳುತ್ತಿರುವಾಗ ಶೋಷಿತರಿಗೆ ರಕ್ಷೆ ಶೋಷಕರಿಗೆ ಶಿಕ್ಷೆ ಆಗುವುದು ಕನಸ್ಸಿನ ಮಾತು.

ಒಂದುಕಡೆ ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿ "ಭಾರತ ಪ್ರಕಾಶಿಸುತ್ತಿದೆ ಎನ್ನುತಿದ್ದಾರೆ ಭಾರತ ಪ್ರಕಾಶಿಸುವುದು ಅಂದರೆ ಇದೆನಾ..?
ಇನ್ನೊಂದು ಕಡೆ ಜಾತ್ಯತೀತ ದಳ ಪಕ್ಷದ ಮುಖ್ಯ ಮಂತ್ರಿಯಾದ ಎಚ್.ಡಿ.ಕುಮಾಸ್ವಾಮಿಯ ಜಾತ್ಯತೀತತೆ ಅಂದ್ರೆ ಇದೆನಾ..?ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿವೆ.
ಇರುವೆಯಂತೆ ಸಾಲುಸಾಲಾಗಿ ದಲಿತರ ಮೇಲೆ ದೌರ್ಜನ್ಯ ಹಿಂಸೆ ಕೊಲೆ ಅತ್ಯಾಚಾರಗಳು ಹೆಚ್ಚಾಗುತ್ತವೆ.
ಆದರೆsc/st ಕಾಯ್ದೆಯನ್ನೆ ದುರ್ಬಲಗೊಳಿಸುವ ಹಾಗು ಸಂವಿಧಾನವೆ ಬದಲಾಯಿಸುವ ಕೇಂದ್ರದ ಸಂಚು ಅಖಂಡ ಭಾರತವೆ ಖಂಡಿಸಬೇಕಾಗಿದೆ.
ಇಂತಹ ವಿಕೃತ ಘಟನೆಗಳು ಮತ್ತೊಮ್ಮೆ ಮರುಕಳಿಸದಂತೆ ಸರ್ಕಾರಗಳು ಜಾಗೃತೆ ವಹಿಸಬೇಕಿವೆ.
ಸಮಾನತೆ. ಸ್ವತಂತ್ರ.ಸಹೋದರತೆಯ ತತ್ವಗಳು ಕೇವಲ ಪುಸ್ತಕದ ಬದನೆಕಾಯಿಯಾಗದೆ ಕಾರ್ಯರೂಪಕ್ಕೆ ತರಬೇಕು.ಸಮಾನತೆಯ ಪ್ರಬುದ್ಧ ಭಾರತ ತಲೆ ಎತ್ತಿ ನಿಲ್ಲಬೇಕು.